**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ನ್ಯಾಯಾಲಯ, ಕನಕಪುರ .**

ಸಿಸಿಃ **11/2010**

ಸಿಡಬ್ಲೂಃ **5**

ಪಿಡಬ್ಲ್ಯೂ ಃ**3**

ಹೆಸರು : ನಾಗರಾಜ್

ತಂದೆ ಹೆಸರು : ರಾಮಣ್ಣ

ವಯಸ್ಸು : **59** ವರ್ಷ

ಉದ್ಯೋಗ : ಸರ್ವೆ ಸೂಪರ್ ವೈಸರ್, ರೆವಿನ್ಯೂ ಇಲಾಖೆ, ರಾಮನಗರ

ವಾಸ : ರಾಮನಗರ

ದಿನಾಂಕಃ**-12.02.2026** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ದಂಡ ಪ್ರಕ್ರಿಯಾ ಸಂಹಿತೆ 299 ರಡಿಯಲ್ಲಿ ಮುಖ್ಯ ವಿಚಾರಣೆ ಎಪಿಪಿ ಅವರಿಂದ**

**ನನ್ನನ್ನು 2005-06 ರಲ್ಲಿ ನೆಲಮಂಗಲದ ಸರ್ವೆ ಇಲಾಖೆಯಿಂದ ಕನಕಪುರದ ಸರ್ವೆಯರ್ ತಹಶೀಲ್ದಾರ್ ಕಚೇರಿ ಕನಕಪುರ ಇಲಾಖೆಗೆ ಡೆಪ್ಯೂಟೇಷನ್ ಮೂಲಕ ನನ್ನ ಕರ್ತವ್ಯವನ್ನು ನಿರ್ವಹಿಸಲು ಆದೇಶ ಮಾಡಿದ್ದರು. ಅದರಂತೆ ಏಪ್ರಿಲ್ 2006 ರಿಂದ ಜೂನ್ 2006 ರವರೆಗೂ ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ಆರೋಪಿಯ ಬಗ್ಗೆ ಗೊತ್ತಿಲ್ಲ. ಚಾಸಾ**-1** ರಿಂದ ಚಾಸಾ**-4**ದ ಚಾಸಾ**-1** ರಿಂದ ಚಾಸಾ**-11** ರವರು ಗೊತ್ತಿರುತ್ತಾರೆ.

ದಿಃ**02.05.2006** ರಂದು ಚಿಕ್ಕಕೊಪ್ಪ ಗ್ರಾಮದ ಸರ್ವೆ ನಂ.**35** ರ ಪ್ರದೇಶಕ್ಕೆ ಚಾಸಾ**-1** ರಿಂದ **4,** ಚಾಸಾ**-6** ಮತ್ತು **7** ರವರ ಜೊತೆಗೆ ಭೇಟಿ ಮಾಡಿ ಸದರಿ ಪ್ರದೇಶದ ಅಳತೆಯನ್ನು ಮಾಡಿ ನೋಡಲಾಗಿ **1** ಎಕರೆ **16** ಗುಂಟೆ ಜಾಗ ಅತಿಕ್ರಮ ಪಡಿಸಿಕೊಂಡು ಅನಧಿಕೃತವಾಗಿ ಗಣಿಗಾರಿಕೆ

ಮಾಡಿರುವುದು ಕಂಡು ಬಂದಿರುತ್ತದೆ. ಸ್ಥಳದ ಅಳತೆ ಮಾಡಿ ಕಚ್ಚಾ ನಕಾಶೆಯನ್ನು ತಯಾರು ಮಾಡಿ ನಂತರ ಕಚೇರಿಗೆ ಬಂದು ನಕಾಶೆಯನ್ನು ತಯಾರು ಮಾಡಿ ವರದಿ ಒಪ್ಪಿ ಸಿರುತ್ತೇನೆ.

ಸಾಕ್ಷಿಗೆ ಈಗ ಸದರಿ ನಕ್ಷೆಯ ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಸಿ) ಎಂದು ಈಗ ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ,

ಕನಕಪುರ .